# ಎಫ್.ಡಿ.ಎ. ಪರೀಕ್ಷೆ-2008

# ಸಾಮಾನ್ಯ ಜ್ಞಾನ

1.ಪ್ರೆಶರ್ ಕುಕ್ಕರ್ ನಲ್ಲಿ ಆಹಾರ ವಸ್ತು ಬೇಗನೆ ಬೇಯಲು ಕಾರಣ

(1) ಆರ್ದ್ರತೆ ಅಥವಾ ತೇವದ ಇರುವಿಕೆ

(2) ಹೆಚ್ಚಿದ ಒತ್ತಡದಿಂದ ನೀರಿನ ಕುದಿಯುವ ಬಿಂದು ಹೆಚ್ಚುತ್ತದೆ

(3) ಹೆಚ್ಚಿದ ಒತ್ತಡದಿಂದ ನೀರಿನ ಕುದಿಯುವ ಬಿಂದು ಕೆಳಗಿಳಿಯುತ್ತದೆ

(4) ಕುಕ್ಕರ್ ಪಾತ್ರೆ ಸ್ಟೀಲ್ ಅಥವಾ ಅಲ್ಯೂಮಿನಿಯಂನಿಂದ ತಯಾರಿಸಿದ್ದಾಗಿದೆ

(ಉತ್ತರ:-2)

2. ಮನುಷ್ಯನಿಗೆ ಅಗತ್ಯವಿರುವ ವಿಟಮಿನ್-ಡಿ ಇದರಲ್ಲಿ ಲಭ್ಯವಿದೆ

(1) ಮಳೆನೀರು

(2) ಆಲ್ಕೋಹಾಲ್

(3) ಸೂರ್ಯನ ಬೆಳಕು

(4) ಚಂದ್ರನ ಬೆಳಕು

(ಉತ್ತರ:-3)

3.ಪರ್ವತಾರೋಹಿಗಳು ಹೆಚ್ಚಿನ ಎತ್ತರದಲ್ಲಿ ಅಸ್ವಸ್ಥತೆಯನ್ನು ಅನುಭವಿಸಲು ಕಾರಣ

(1) ಗಾಳಿಯ ಕೊರತೆ

(2) ಆಮ್ಲಜನಕದ ಕೊರತೆ

(3) ಗಾಳಿಯಲ್ಲಿ ನೀರಾವಿಯ ಕೊರತೆ

(4) ಆಹಾರದ ಕೊರತೆ

(ಉತ್ತರ:-2)

4. ವಸ್ತುವಿನ ತೇಲುವಿಕೆಗೆ ಕಾರಣ

(1) ಉತ್ಪ್ಲಾವಕತೆ-ದ್ರವದ ಮೇಲೊತ್ತಡ

(2) ಜಿಗುಟು-ದ್ರವದ ಆಂತರಿಕ ಘರ್ಷಣೆ

(3) ಮೇಲ್ಮೈ ಎಳೆತ

(4) ವಿಶಿಷ್ಟ ಗುರುತ್ವ-ಸಾಪೇಕ್ಷ ಸಾಂದ್ರತೆ (ಉತ್ತರ:-1)

5. ಭೂಸ್ಥಿರ ಉಪಗ್ರಹವು ಭೂಮಿಯ ಸುತ್ತ ಒಂದು ಪೂರ್ಣ ಪರಿಭ್ರಮಣೆಗೆ ತೆಗೆದುಕೊಳ್ಳುವ ಕಾಲ

(1) 12 ಗಂಟೆ

(2) 36 ಗಂಟೆ

(3) 24 ಗಂಟೆ

(4) 6 ಗಂಟೆ

(ಉತ್ತರ:-3)

6. ಸೂರ್ಯನ ಶಕ್ತಿ ಉತ್ಪಾದನೆಗೊಳ್ಳುವುದು

(1) ಸಮ್ಮಿಲನ ಕಾರ್ಯ ವಿಧಾನದಿಂದ

(2) ವಿದಳನ ಕಾರ್ಯ ವಿಧಾನದಿಂದ

(3) ರಾಸಾಯನಿಕ ಸ್ಫೋಟದಿಂದ

(4) ವಿದ್ಯುತ್ ಬಿಡುಗಡೆಯಿಂದ

(ಉತ್ತರ:-1)

7. ದ್ರವ್ಯ ಮತ್ತು ಶಕ್ತಿಯ ಸಮಾನತೆಯ ತತ್ವವನ್ನು ಹುಟ್ಟು ಹಾಕಿದವರು

(1) ಡಾಲ್ಟನ್

(2) ರುಥರ್ ಫೋರ್ಡ್

(3) ಐನ್ ಸ್ಟೀನ್

(4) ಪ್ಲಾಂಕ್

(ಉತ್ತರ:-3)

8. ಆವರ್ತನೀಯ ಕೋಷ್ಟಕವನ್ನು ಸಿದ್ಧಗೊಳಿಸಿದವರು

(1) ಮೆಂಡಲ್

(2) ಅವಗಡ್ರೋ

(3) ಮೆಂಡಲೀವ್

(4) ನ್ಯೂಟನ್

(ಉತ್ತರ:-3)

9. ಬ್ರೇಕ್ ಹಾಕಿದಾಗ ಚಲಿಸುತ್ತುರುವ ವಾಹನ ನಿಲ್ಲುತ್ತದೆ.-ಹೀಗಾಗಲು ಕಾರಣ

(1) ಘರ್ಷಣೆ

(2) ವೇಗೋತ್ಕರ್ಷ

(3) ಗುರುತ್ವಾಕರ್ಷಣೆ

(4) ಮೇಲಿನ ಯಾವುದೂ ಅಲ್ಲ

(ಉತ್ತರ:-1)

10. ಕಾಮನ ಬಿಲ್ಲಿನ ರಚನೆಗೆ ಕಾರಣ

(1) ಬೆಳಕಿನ ಹರಡುವಿಕೆ (Scattering)

(2) ಬೆಳಕಿನ ಚದುರುವಿಕೆ (Dispersion)

(3) ಬೆಳಕಿನ ವ್ಯತಿಕರಣ (Interference)

(4) ಬೆಳಕಿನ ವಿವರ್ತನ (Diffraction)

(ಉತ್ತರ:-2)

11. ಮಣ್ಣಿಲ್ಲದೆ ಅಗತ್ಯವಿರುವಷ್ಟು ರಾಸಾಯನಿಕ ಆಹಾರ ಒದಗಿಸಿದ ನೀರಿನಲ್ಲಿ ಗಿಡಗಳನ್ನು ಬೆಳೆಯಿಸುವ ಕಲೆಯೇ

(1) ಹಾರ್ಟಿಕಲ್ಚರ್

(2) ಹಿಸ್ಟೋಲಜಿ

(3) ಹೈಡ್ರೋಪೋನಿಕ್ಸ್

(4) ಹೈಡ್ರೋಸ್ಟಾಟಿಕ್ಸ್

(ಉತ್ತರ:-3)

12. ಸಸ್ಯ ಮತ್ತು ಪ್ರಾಣಿಗಳನ್ನು ಅವುಗಳ ಆದಿರೂಪದಿಂದ ಅಭಿವೃದ್ಧಿಗೊಳಿಸುವ ವಿಜ್ಞಾನವೇ

(1) ಜೀನಿಯಾಲಜಿ (Genealogy)

(2) ಜೆನೆಟಿಕ್ಸ್ (Genetics)

(3) ಜೂವಾಲಜಿ (Zoology)

(4) ಮೇಲಿನ ಯಾವುದೂ ಅಲ್ಲ

(ಉತ್ತರ:-1)

13. ಸಮುದ್ರದ ನೀರಿನ ಪಿ.ಹೆಚ್. (PH) 8.3 ಎಂದು ಕಂಡುಬಂದಿದೆ, ಆಗ ಅದು

(1) ಒಂದು ಕ್ಷಾರ

(2) ಒಂದು ಆಮ್ಲ

(3) ತಟಸ್ಥ ದ್ರವ

(4) ಮೇಲಿನ ಯಾವುದೂ ಅಲ್ಲ

(ಉತ್ತರ:-1)

14. ಗಾಳಿಯಲ್ಲಿನ ಶಬ್ಧದ ಅಲೆಗಳು

(1) ಅಡ್ಡ ಅಲೆಗಳು

(2) ನೀಳ ಅಲೆಗಳು ( ಉದ್ದದ ಅಲೆಗಳು)

(3) ನೀಳ ಹಾಗೂ ಅಡ್ಡ ಅಲೆಗಳು

(4) ವಿದ್ಯುತ್ ಕಾಂತೀಯ ಅಲೆಗಳು

(ಉತ್ತರ:-2)

15. ಟಿ.ವಿ., ರೇಡಿಯೋ ಮತ್ತು ಮೊಬೈಲ್ ಸಂಕೇತಗಳು

(1) ಪ್ರಸಾರಕ್ಕಾಗಿ ಗಾಳಿಯನ್ನು ಮಾಧ್ಯಮವನ್ನಾಗಿ ಉಪಯೋಗಿಸುತ್ತವೆ

(2) ಪ್ರಸಾರಕ್ಕಾಗಿ ಯಾವ ಮಾಧ್ಯಮವನ್ನೂ ಉಪಯೋಗಿಸುವುದಿಲ್ಲ

(3) ಪ್ರಸಾರಕ್ಕಾಗಿ ಭೂಮಿಯನ್ನು ಮಾಧ್ಯಮವನ್ನಾಗಿ ಉಪಯೋಗಿಸುತ್ತದೆ

(4) ಪ್ರಸಾರಕ್ಕಾಗಿ ಓಝೋನ್ ಪದರವನ್ನು ಉಪಯೋಗಿಸುತ್ತದೆ

(ಉತ್ತರ:-2)

16. ಪರ್ಯಾಯ ವಿದ್ಯುತ್ತನ್ನು ಹೆಚ್ಚು ಓಲ್ಟೇಜ್ ನಿಂದ ಕಡಿಮೆ ಅಥವಾ ಕಡಿಮೆ ಓಲ್ಟೇಜ್ ನಿಂದ ಹೆಚ್ಚು ಪರಿವರ್ತಿಸಲು ಉಪಯೋಗಿಸುವ ಉಪಕರಣ

(1) ಟ್ರಾನ್ಸ್ ಮೀಟರ್

(2) ಕಮ್ಯುಟೇಟರ್

(3) ಅಕ್ಯುಮುಲೇಟರ್

(4) ಟ್ರಾನ್ಸ್ ಪಾರ್ಮರ್

(ಉತ್ತರ:-4)

17. ಮೋಡಗಳಲ್ಲಿ ಮಿಂಚು ಉಂಟಾಗುವುದಕ್ಕೆ ಕಾರಣ

(1) ಸ್ಥಾಯೀ ವಿದ್ಯುತ್ತಿನ ವಿಸರ್ಜನೆ

(2) ಮೋಡಗಳಲ್ಲಿನ ಶುಷ್ಕತೆ

(3) ತಣ್ಣನೆಯ ಸ್ಥಿತಿಗಳ ಉಪಸ್ಥಿತಿ

(4) ಮೇಲಿನ ಯಾವುದೂ ಅಲ್ಲ

(ಉತ್ತರ:-1)

18. ಬಯಲು ಅಥವಾ ಜಮೀನಿನಲ್ಲಿನ ನೀರು ಗಿಡದ ಎಲೆಗಳನ್ನು ಈ ವಿಧಾನದಿಂದ ತಲುಪುತ್ತದೆ

(1) ಹೀರುವಿಕೆ

(2) ಕೇಶನಾಳಾಕರ್ಶಣ

(3) ಆವಿಯಾಗುವಿಕೆ

(4) ನೀರಿನ ಸಹಜ ಪ್ರವಾಹ ಮಾರ್ಗದಲ್ಲಿನ ಪರಿಚಲನೆ

(ಉತ್ತರ:-2)

19. ವೇಗವರ್ಧಕ ಪರಿವರ್ತಕವು ಮೋಟಾರುಗಾಡಿಯಲ್ಲಿ ಇದನ್ನು ಪರಿವರ್ತಿಸುತ್ತದೆ

(1) ಕಾರ್ಬನ್ ಮೋನಾಕ್ಸೈಡನ್ನು ಕಾರ್ಬನ್ ಡೈಆಕ್ಸೈಡ್ ಮತ್ತು ನೀರನ್ನಾಗಿ

(2) ಕಾರ್ಬನನ್ನು ಕಾರ್ಬನ್ ಡೈ ಆಕ್ಸೈಡ್ ಆಗಿ

(3) ನೈಟ್ರೋಜನನ್ನು ನೈಟ್ರೋಜನ್ ಆಕ್ಸೈಡ್ ಮತ್ತು ನೀರನ್ನಾಗಿ

(4) ಮೇಲಿನ ಯಾವುದೂ ಅಲ್ಲ

(ಉತ್ತರ:-1)

20. ಹಿಮಾಚಲ ಪ್ರದೇಶದ ಮುಖ್ಯಮಂತ್ರಿ (2008)

(1) ಪ್ರೇಂ ಕುಮಾರ್ ಧುಮಾಲ್

(2) ನರೇಂದ್ರ ಮೋದಿ

(3) ಕೇಶುಬಾಯ್ ಪಾಟೇಲ್

(4) ವಿಜಯ ರಾಜೇ ಸಿಂಧಿಯಾ

(ಉತ್ತರ:-1)

21. ಲೇಖಕಿ ತಸ್ಲೀಮ ನಸ್ರೀನ್ ಇಲ್ಲಿಗೆ ಸೇರಿದವರು

(1) ಭಾರತ

(2) ಬಾಂಗ್ಲಾದೇಶ

(3) ಭೂತಾನ್

(4) ಪಶ್ಚಿಮ ಬಂಗಾಳ

(ಉತ್ತರ:-2)

22. ಜೂನ್ 28, 2007ರಂದು ಯುನಸ್ಕೋ (UNESCO)ದ ವಿಶ್ವಪರಂಪರೆಯ ಪಟ್ಟಿಗೆ ಸೇರಿಸಲ್ಪಟ್ಟ 17ನೇ ಶತಮಾನದ ಮೊಗಲ್ ಅದ್ಭುತವು

(1) ತಾಜ್ ಮಹಲ್

(2) ಬಿಜಾಪುರದ ಗೋಲ್ ಗುಂಬಜ್

(3) ಕುತುಬ್ ಮಿನಾರ್

(4) ದೆಹಲಿ ಕೆಂಪು ಕೋಟೆ

23. ಮೊರ್ಲಿಯ ಲಿನಾರೆಸ್ (Morelia-Linares)ನಲ್ಲಿ ಪಂದ್ಯಾಟವನ್ನು ಗೆದ್ದವರು

(1) ಸಾನಿಯ ಮಿರ್ಜಾ

(2) ಡೋಲ ಬೆನರ್ಜಿ

(3) ವಿಶ್ವನಾಥನ್ ಆನಂದ್

(4) ನಾರಾಯಣ್ ಕಾರ್ತಿಕೇಯನ್

(ಉತ್ತರ:-3)

24. ಭಾರತದ ಮೊದಲ ವಾಣಿಜ್ಯ ಅಂತರಿಕ್ಷಯಾನ

(1) ಪಿ.ಎಸ್.ಎಲ್.ವಿ.-ಸಿ8

(2) ಇನ್ಸಾಟ್

(3) ಅಗ್ನಿ-III

(4) ಮೇಲಿನ ಯಾವುದೂ ಅಲ್ಲ

(ಉತ್ತರ:-1)

25. ಈ ಕೆಳಗಿನ ಯಾವ ಪ್ರಕರಣದಲ್ಲಿ ಭಾರತದ ಸರ್ವೋಚ್ಛ ನ್ಯಾಯಾಲಯವು "ಭಾವಿ ತಳ್ಳಿ ಹಾಕುವ ಸಿದ್ಧಾಂತ" (Doctrine of prospective over rulinf) ವನ್ನು ವಿಧಿಸಿತು

(1) ಶಂಕರಿ ಪ್ರಸಾದ್ V ಭಾರತದ ಒಕ್ಕೂಟ

(2) ಕೇಶವಾನಂದ ಭಾರತಿ V ಕೇರಳ ರಾಜ್ಯ

(3) ಗೋಲಕ್ ನಾಥ್ V ಪಂಜಾಬ್ ರಾಜ್ಯ

(4) ಮಿನರ್ವ ಮಿಲ್ ಪ್ರಕರಣ

(ಉತ್ತರ:-3)

26. ಭಾರತದ ಸಂವಿಧಾನದ ಯಾವ ಅನುಚ್ಛೇದವು ವಿತ್ತ ಆಯೋಗವನ್ನು ಸ್ಥಾಪಿಸಲಾಯಿತು

(1) 281ನೇ ಅನುಚ್ಛೇದ

(2) 279ನೇ ಅನುಚ್ಛೇದ

(3) 282ನೇ ಅನುಚ್ಛೇದ

(4) 280ನೇ ಅನುಚ್ಛೇದ

(ಉತ್ತರ:-4)

27. ಎಷ್ಟನೇ ತಿದ್ದುಪಡಿ ಕಾಯ್ದೆಹು ಶಿಕ್ಷಣದ ಹಕ್ಕನ್ನು ಮೂಲಭೂತ ಹಕ್ಕನ್ನಾಗಿಸುವ 21A ವಿಧಿಯನ್ನು ಭಾರತದ ಸಂವಿಧಾನದಲ್ಲಿ ಅಳವಡಿಸಿತು

(1) 86ನೇ ತಿದ್ದುಪಡಿ

(2) 84ನೇ ತಿದ್ದುಪಡಿ

(3) 88ನೇ ತಿದ್ದುಪಡಿ

(4) 87ನೇ ತಿದ್ದುಪಡಿ

(ಉತ್ತರ:-1)

28. ಸಂವಿಧಾನದ 19(1)(d) ವಿಧಿಯು ಖಾತರಿಪಡಿಸಿದ ಸ್ವಾತಂತ್ರ್ಯವು

(1) ಸಂಘ ಸಂಸ್ಥೆ ರಚಿಸಿಕೊಳ್ಳುವ ಸ್ವಾತಂತ್ರ್ಯ

(2) ದೇಶಾದ್ಯಂತ ಸಂಚರಿಸುವ ಸ್ವಾತಂತ್ರ್ಯ

(3) ಭಾರತದ ಯಾವುದೇ ಭಾಗದಲ್ಲಾದರೂ ನೆಲೆಸುವ ಸ್ವಾತಂತ್ರ್ಯ

(4) ಯಾವುದೇ ಉದ್ಯೋಗ ವ್ಯಾಪಾರ ಕೈಗೊಳ್ಳುವ ಸ್ವಾತಂತ್ರ್ಯ

(ಉತ್ತರ:-2)

29. ಭಾರತದ ಕಾನೂನು ಆಯೋಗದ ಅಧ್ಯಕ್ಷರು (2008)

(1) ನ್ಯಾಯಮೂರ್ತಿ ಎ.ಆರ್. ಲಕ್ಷ್ಮಣನ್

(2) ನ್ಯಾಯಮೂರ್ತಿ ಜೆ.ಎಸ್. ವರ್ಮ

(3) ನ್ಯಾಯಮೂರ್ತಿ ಎ.ಎಸ್. ಆನಂದ್

(4) ನ್ಯಾಯಮೂರ್ತಿ ಜಗನ್ ಮೋಹನ್ ರೆಡ್ಡಿ

(ಉತ್ತರ:-1)

30. ಸಂವಿಧಾನದ ಎಷ್ಟನೇ ಅನುಚ್ಛೇದವು ಭಾರತದ ರಾಷ್ಟ್ರಪತಿಯವರಿಗೆ ಕೆಲವು ರಕ್ಷಣೆ ಮತ್ತು ವಿನಾಯಿತಿ(immunity)ಗಳನ್ನು ಖಾತರಿಪಡಿಸುತ್ತದೆ

(1) 363ನೇ ಅನುಚ್ಛೇದ

(2) 361ನೇ ಅನುಚ್ಛೇದ

(3) 360ನೇ ಅನುಚ್ಛೇದ

(4) 359ನೇ ಅನುಚ್ಛೇದ

(ಉತ್ತರ:-2)

31. ಎಷ್ಟನೇ ತಿದ್ದುಪಡಿ ಕಾಯ್ದೆಯು ಸಂವಿಧಾನದಲ್ಲಿ ಮೂಲಭೂತ ಕರ್ತವ್ಯಗಳನ್ನು (51-A ಅನುಚ್ಛೇದ) ಅಳವಡಿಸಿತು

(1) 1977ರ 43ನೇ ತಿದ್ದುಪಡಿ

(2) 1976ರ 42ನೇ ತಿದ್ದುಪಡಿ

(3) 1978ರ 44ನೇ ತಿದ್ದುಪಡಿ

(4) 1963ರ 15ನೇ ತಿದ್ದುಪಡಿ

(ಉತ್ತರ:-2)

32. ಭಾರತದ ರಾಷ್ಟ್ರಪತಿಯವರಿಗೆ ಭಾರತದ ಸಂವಿಧಾನದ ಎಷ್ಟನೇ ಅನುಚ್ಛೇದವು ಅಟಾರ್ನಿ ಜನರಲ್ (Attorney General)ರನ್ನು ನೇವಕ ಮಾಡುವ ಅಧಿಕಾರ ನೀಡಿದೆ

(1) 74ನೇ ಅನುಚ್ಛೇದ

(2) 76ನೇ ಅನುಚ್ಛೇದ

(3) 77ನೇ ಅನುಚ್ಛೇದ

(4) 368ನೇ ಅನುಚ್ಛೇದ (ಉತ್ತರ:-2)

33. ಭಾರತದ ಸರ್ವೋಚ್ಚ ನ್ಯಾಯಾಲಯವು ಘೋಷಿಸಿದ ಯಾವುದೇ ಕಾನೂನು ಇತರ ಎಲ್ಲ ನ್ಯಾಯಾಲಯಗಳಿಗೆ ಬಂಧನಕಾರಕವಾಗಿರುತ್ತದೆ ಮತ್ತು ಅನ್ವಯವಾಗುತ್ತದೆ ಎಂಬುದನ್ನು ಒಳಗೊಂಡಿರುವುದು

(1) ಸಂವಿಧಾನದ 142ನೇ ಅನುಚ್ಛೇದ

(2) ಸಂವಿಧಾನದ 141ನೇ ಅನುಚ್ಛೇದ

(3) ಸಂವಿಧಾನದ 136ನೇ ಅನುಚ್ಛೇದ

(4) ಸಂವಿಧಾನದ 139ನೇ ಅನುಚ್ಛೇದ

(ಉತ್ತರ:-2)

34. ಕಛೇರಿಗಳಲ್ಲಿ ಅಧಿಕೃತ ಭಾಷೆಯಾಗಿ ಆಂಗ್ಲ ಭಾಷೆಯನ್ನು ಬಳಸಿಕೊಳ್ಳಲು ಸಂವಿಧಾನವು ಪ್ರಾರಂಭದಲ್ಲಿ ನೀಡಿದ ಅನುಮತಿಯನ್ನು ಇದರ ಮೂಲಕ 15 ವರ್ಷಗಳವರೆಗೆ ವಿಸ್ತರಿಸಲಾಯಿತು

(1) ಸಂವಿಧಾನದ ತಿದ್ದುಪಡಿ

(2) ಸಂಸತ್ತು ಮಾಡಿದ ಶಾಸನ

(3) ಸರಕಾರಿ ಆದೇಶ

(4) ರಾಷ್ಟ್ರಪತಿಯವರ ಆದೇಶ

(ಉತ್ತರ:-2)

35. ಪಂಚವಾರ್ಷಿಕ ಯೋಜನೆಯ ಪರಿಕಲ್ಪನೆಯನ್ನು ಭಾರತವು ಯಾವ ದೇಶದಿಂದ ಎರವಲು ಪಡೆಯಿತು

(1) ಅಮೆರಿಕ ಸಂಯುಕ್ತ ಸಂಸ್ಥಾನ

(2) ಜರ್ಮನಿ

(3) ಐರ್ಲ್ಯಾಂಡ್

(4) ಯು.ಎಸ್.ಎಸ್.ಆರ್. (ಉತ್ತರ:-4)

36. 13ನೇ ಅನುಚ್ಛೇದದ ಅರ್ಥವ್ಯಾಪ್ತಿಯಲ್ಲಿ 368ನೇ ಅನುಚ್ಛೇದದನ್ವಯ ಮಾಡಿದ ತಿದ್ದುಪಡಿಯನ್ನು ಶಾಸನ ಎಂದು ಪರಿಗಣಿಸಲಾಗುವುದಿಲ್ಲ, ಎಂದು ತಿಳಿಸುವಾಗ IVನೇ ಉಪವಿಧಿಯನ್ನು 13ನೇ ಅನುಚ್ಛೇದಕ್ಕೆ ಸೇರಿಸಿದ ಸಂವಿಧಾನಿಕ ತಿದ್ದುಪಡಿ ಯಾವುದು

(1) 22ನೇ ತಿದ್ದುಪಡಿ

(2) 23ನೇ ತಿದ್ದುಪಡಿ

(3) 24ನೇ ತಿದ್ದುಪಡಿ

(4) 25ನೇ ತಿದ್ದುಪಡಿ (ಉತ್ತರ:-3)

37. ಸಂವಿಧಾನದ ಎಷ್ಟನೇ ಅನುಚ್ಛೇದವು ರಾಜ್ಯಕ್ಕೆ ರಾಜ್ಯಪಾಲರ ಹುದ್ದೆಯನ್ನು ಒದಗಿಸಿದೆ

(1) 173ನೇ ಅನುಚ್ಛೇದ

(2) 273ನೇ ಅನುಚ್ಛೇದ

(3) 73ನೇ ಅನುಚ್ಛೇದ

(4) 153ನೇ ಅನುಚ್ಛೇದ

(ಉತ್ತರ:-4)

38. ಕೆಳಗಿನ ಯಾವುದು ಭಾರತದ ಸಂವಿಧಾನದಲ್ಲಿ ಮೂಲಭೂತ ಹಕ್ಕಾಗಿ ಉಳಿದಿಲ್ಲ

(1) ಸಮಾನತೆಯ ಹಕ್ಕು

(2) ಶಿಕ್ಷಣದ ಹಕ್ಕು

(3) ಶೋಷಣೆಯ ವಿರುದ್ಧ ಹಕ್ಕು

(4) ಆಸ್ತಿಯ ಹಕ್ಕು

(ಉತ್ತರ:-4)

39. ಭಾರತದ ಸಂವಿಧಾನದಲ್ಲಿ ಮೂಲಭೂತ ಹಕ್ಕುಗಳನ್ನು ನೀಡಿರುವುದು

(1) 36 ರಿಂದ 51ರ ತನಕ ಅನುಚ್ಛೇದಗಳು

(2) 13 ರಿಂದ 36ರ ತನಕ ಅನುಚ್ಛೇದಗಳು

(3) 12 ರಿಂದ 35ರ ತನಕ ಅನುಚ್ಛೇದಗಳು

(4) 14 ರಿಂದ 35ರ ತನಕ ಅನುಚ್ಛೇದಗಳು

(ಉತ್ತರ:-3)

40. ತಪ್ಪು ಬಂಧನದ ಸಂದರ್ಭದಲ್ಲಿ ಈ ಕೆಳಗಿನ ಯಾವ ರಿಟ್ ಅಥವಾ ಆಜ್ಞೆಯನ್ನು ಹೊರಡಿಸಲಾಗುತ್ತದೆ

(1) ಬಂಧೀ ಪ್ರತ್ಯಕ್ಷೀಕರಣ (Habeas corpus)

(2) ಅಧಿಕಾರ ಪ್ರಚ್ಛಾ (Quo warranto)

(3) ಪ್ರತಿಷೇಧ (Prohibition)

(4) ಪರಮಾದೇಶ (Mandamus)

(ಉತ್ತರ:-1)

41. ಕೆಳಗಿನ ಯಾವ ವಿಧದ ಮೂಲಭೂತ ಹಕ್ಕು ಅಸ್ಪೃಶ್ಯತೆಯ ನಿವಾರಣೆಯನ್ನು ಒಳಗೊಂಡಿದೆ

(1) ಧಾರ್ಮಿಕ ಹಕ್ಕು

(2) ಸಮಾನತೆಯ ಹಕ್ಕು

(3) ಸ್ವಾತಂತ್ರ್ಯದ ಹಕ್ಕು

(4) ಶೋಷಣೆಯ ವಿರುದ್ಧ ಹಕ್ಕು

(ಉತ್ತರ:-2)

42. ಮೂಲಭೂತ ಹಕ್ಕುಗಳನ್ನು ಜಾರಿಗೆ ತರುವಂತೆ ಬಲವಂತ ಮಾಡಲು ರಿಟ್ ಅಥವಾ ಆಜ್ಞೆಯನ್ನು ಇವರು ಹೊರಡಿಸಬಹುದು

(1) ಸರ್ವೋಚ್ಛ ನ್ಯಾಯಾಲಯ ಮಾತ್ರ

(2) ಭಾರತದ ರಾಷ್ಟ್ರಪತಿ

(3) ಸರ್ವೋಚ್ಛ ನ್ಯಾಯಾಲಯ ಮತ್ತು ಉಚ್ಛ ನ್ಯಾಯಾಲಯ

(4) ಜಿಲ್ಲಾ ನ್ಯಾಯಾಲಯಗಳು

(ಉತ್ತರ:-3)

43. ಭಾರತದ ರಾಷ್ಟ್ರಪತಿಯವರು ಆರಿಸಲ್ಪಡುವುದು

(1) ಲೋಕಸಭೆಯ ಚುನಾಯಿತ ಸದಸ್ಯರಿಂದ

(2) ರಾಜ್ಯ ವಿಧಾನ ಸಭೆಗಳ ಚುನಾಯಿತ ಪ್ರತಿನಿಧಿಗಳು

(3) ರಾಜ್ಯ ಸಭೆಯ ಚುನಾಯಿತ ಸದಸ್ಯರಿಂದ

(4) ಕೇಂದ್ರ ಸಂಸತ್ತಿನ ಎರಡೂ ಸದನದ ಚುನಾಯಿತ ಸದಸ್ಯರು ಮತ್ತು ರಾಜ್ಯ ವಿಧಾನ ಸಭೆಗಳ ಚುನಾಯಿತ ಸದಸ್ಯರಿಂದ

(ಉತ್ತರ:-4)

44. ಭಾರತದ ಉಪರಾಷ್ಟ್ರಪತಿಯಾಗಲು ಈ ಕೆಳಗಿನ ಯಾವ ಅರ್ಹತೆ ಅವಶ್ಯಕವಲ್ಲ

(1) ಪ್ರಕೃತ ರಾಜ್ಯ ಸಭೆಯ ಸದಸ್ಯನಾಗಿರಬೇಕು

(2) ಭಾರತದ ಪ್ರಜೆಯಾಗಿರಬೇಕು

(3) 35 ವರ್ಷ ಪ್ರಾಯ ಆಗಿರಬೇಕು

(4) ರಾಜ್ಯ ಸಭೆಯ ಸದಸ್ಯನಾಗಲು ಬೇಕಾದ ಅರ್ಹತೆ ಹೊಂದಿರಬೇಕು

(ಉತ್ತರ:-1)

45. ಈ ಕೆಳಗಿನ ಯಾವುದು ಸರಿಯಲ್ಲ

(1) ಮಂತ್ರಿ ಮಂಡಲದ ಸಲಹೆಯ ಮೇರೆಗೆ ರಾಷ್ಟ್ರಪತಿಯವರು ರಾಜ್ಯಪಾಲರನ್ನು ವಜಾಗೊಳಿಸಬಹುದು

(2) ಮಂತ್ರಿ ಮಂಡಲದ ಸಲಹೆಯ ಮೇರೆಗೆ ರಾಷ್ಟ್ರಪತಿಯವರು ಸುಗ್ರೀವಾಜ್ಞೆ ಹೊರಡಿಸಬಹುದು

(3) ಯಾವುದೇ ರಾಜ್ಯದಲ್ಲಿ ಸಂವಿಧಾನಿಕ ಕುಸಿತ ಉಂಟಾದಾಗ ಮಂತ್ರಿಮಂಡಲದ ಸಲಹೆಯ ಮೇರೆಗೆ ರಾಷ್ಟ್ರಪತಿಯವರು ಆ ರಾಜ್ಯದ ಆಡಳಿತವನ್ನು ತನ್ನ ವಶಕ್ಕೆ ತೆಗೆದುಕೊಳ್ಳಬಹುದು

(4) ಮಂತ್ರಿಮಂಡಲದ ಸಲಹೆಯ ಮೇರೆಗೆ ರಾಷ್ಟ್ರಪತಿಯವರು ರಾಜ್ಯದ ಮುಖ್ಯಮಂತ್ರಿಯನ್ನು ಪದಚ್ಯುತಿಗೊಳಿಸಬಹುದು

(ಉತ್ತರ:-4)

46. ಕೆಳಗಿನ ಯಾರು ಡಿಸೆಂಬರ್ 2007ರ ಉಡುಪಿ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು

(1) ಡಾ. ನಿಸಾರ್ ಅಹಮದ್

(2) ಎಲ್.ಎಸ್.ಶೇಷಗಿರಿರಾವ್

(3) ವ್ಯಾಸರಾಯ ಬಲ್ಲಾಳ

(4) ಡಾ.ಡಿ.ವೀರೇಂದ್ರ ಹಗ್ಗಡೆ

(ಉತ್ತರ:-2)

47. ಬೆನಜಿರ್ ಭುಟ್ಟೋರವರ ಹತ್ಯೆಯಾದ ದಿನ

(1) ಡಿಸೆಂಬರ್ 26, 2007

(2) ಡಿಸೆಂಬರ್ 27, 2007

(3) ಡಿಸೆಂಬರ್ 28, 2007

(4) ಡಿಸೆಂಬರ್ 29, 2007

(ಉತ್ತರ:-2)

48. ವಿಶ್ವಸಂಸ್ಥೆಯ ಪ್ರಸಕ್ತ (2008) ಪ್ರಧಾನ ಕಾರ್ಯದರ್ಶಿಯವರು

(1) ದಕ್ಷಿಣ ಕೊರಿಯಾದವರು

(2) ಮಲೇಶಿಯಾದವರು

(3) ಬರ್ಮಾದವರು

(4) ವಿಯಟ್ನಾಂದವರು (ಉತ್ತರ:-1)

49. ಕೆಳಗಿನ ಯಾವ ಭಾರತೀಯ, ಅಂತರರಾಷ್ಟ್ರೀಯ ನ್ಯಾಯಾಲಯದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು

(1) ನ್ಯಾಯಮೂರ್ತಿ ಎಂ.ಸಿ. ಛಾಗ್ಲ

(2) ನ್ಯಾಯಮೂರ್ತಿ ಆರ್.ಎಸ್.ಪಾಠಕ್

(3) ನ್ಯಾಯಮೂರ್ತಿ ನಾಗ್ರೇಂದ್ರ ಸಿಂಗ್

(4) ನ್ಯಾಯಮೂರ್ತಿ ಬಿ.ಎನ್.ರಾವ್

(ಉತ್ತರ:-3)

50. ಪಂಚಾಯತ್ ರಾಜ್ ಪದ್ಧತಿಯನ್ನು ಮೊತ್ತ ಮೊದಲು ಜಾರಿಗೊಳಿಸಿದ ರಾಜ್ಯ

(1) ರಾಜಸ್ಥಾನ

(2) ಮಹಾರಾಷ್ಟ್ರ

(3) ಗುಜರಾತ್

(4) ಬಿಹಾರ್

(ಉತ್ತರ:-1)

51. ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ ಎಂದು ರಚನೆಯಾಯಿತು

(1) 1919

(2) 1920

(3) 1921

(4) 1922

(ಉತ್ತರ:-2)

52. ಥಾರ್ ಮರುಭೂಮಿಯು ಭಾರತೆ ಎಷ್ಟು ರಾಜ್ಯಗಳಲ್ಲಿ ಹರಡಿದೆ

(1) ಒಂದುಜ

(2) ಎರಡು

(3) ಮೂರು

(4) ನಾಲ್ಕು

(ಉತ್ತರ:-4)

53. ಮುಂಬಯಿಯಿಂದ ಥಾನೆಯ ತನಕದ 34 ಕಿ.ಮೀ. ಉದ್ದದ ರೈಲು ದಾರಿಯಲ್ಲಿ ಮೊದಲಿಗೆ ರೈಲುಬಂಡಿ ಓಡಾಡಲು ಪ್ರಾರಂಭವಾದ ವರ್ಷ

(1) 1853

(2) 1855

(3) 1859

(4) 1861

(ಉತ್ತರ:-1)

54. 1938ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ನಿಂದ ಸ್ಥಾಪಿತವಾದ ರಾಷ್ಟ್ರೀಯ ಯೋಜನಾ ಮಂಡಳಿಯ ಅಧ್ಯಕ್ಷರು

(1) ಜವಾಹರಲಾಲ್ ನೆಹರು

(2) ಸುಭಾಶ್ಚಂದ್ರ ಭೋಸ್

(3) ಅಸಾಫ್ ಅಲಿ

(4) ಜೆ.ಬಿ.ಕೃಪಲಾನಿ

(ಉತ್ತರ:-1)

55. ಭಾರತಕ್ಕಾಗಿ ಜನತಾ ಯೋಜನೆಯನ್ನು 1944ರಲ್ಲಿ ಯಾರು ರೂಪಿಸಿದರು

(1) ಜವಾಹರಲಾಲ್ ನೆಹರು

(2) ಎಂ.ಎನ್.ರಾಯ್

(3) ಸುಭಾಶ್ಚಂದ್ರ ಭೋಸ್

(4) ಮಹಾತ್ಮಗಾಂಧಿ

(ಉತ್ತರ:-2)

56. ಸಮಾಜವಾದೀ ಮಾದರಿ ಸಮಾಜವನ್ನು ಹೊಂದುವುದೇ ಆರ್ಥಿಕ ನೀತಿಯ ವಿಸ್ತೃತ ಉದ್ದೇಶವಾಗಿರಬೇಕು ಎಂದು ಸಂಸತ್ತು ಘೋಷಿಸಿದ ವರ್ಷ

(1) 1950

(2) 1952

(3) 1954

(4) 1956 (ಉತ್ತರ:-4)

57. ಕೆಳಗಿನ ಯಾವುದು ಭಾರತದಲ್ಲಿ ಪ್ರಧಾನ ಖಾರಿಫ್ ಬೆಳೆ ಅಲ್ಲ

(1) ಭತ್ತ

(2) ಗೋಧಿ

(3) ಮುಸುಕಿನ ಜೋಳ

(4) ಹತ್ತಿ

(ಉತ್ತರ:-2)

58. ಕೆಳಗೆ ಕಾಣಿಸಿದ ಭಾರತದ ಯಾವ ರಾಜ್ಯವು ಪ್ರತಿ ಹೆಕ್ಟೇರಿಗೆ ಗರಿಷ್ಟ ಪ್ರಮಾಣದ ಕಾಡು ಸಂಪತ್ತನ್ನು ಉತ್ಪಾದಿಸುತ್ತದೆ

(1) ಮಧ್ಯಪ್ರದೇಶ

(2) ಉತ್ತರಪ್ರದೇಶ

(3) ಕೇರಳ

(4) ಅಸ್ಸಾಂ

(ಉತ್ತರ:-4)

59. ಎ.ಬಿ.ವಾಜಪೇಯಿಯವರು 1977ರಲ್ಲಿ ಹಿಂದಿಯಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯನ್ನುದ್ದೇಶಿಸಿ ಭಾಷಣ ಮಾಡಿದ್ದು

(1) ಪ್ರಧಾನಮಂತ್ರಿಯಾಗಿ

(2) ವಿದೇಶಾಂಗ ವ್ಯವಹಾರಗಳ ಮಂತ್ರಿಯಾಗಿ

(3) ಸಂಸತ್ತಿನ ಸದಸ್ಯನಾಗಿ

(4) ಮೇಲಿನ ಯಾವುದೂ ಆಗದಿರುವಾಗ

(ಉತ್ತರ:-2)

60. ಕೆಳಗಿನ ಯಾವ ಯತಿಯ ಜನ್ಮಸ್ಥಳ ಕರ್ನಾಟಕದ ಉಡುಪಿ ಆಗಿದೆ

(1) ಸಾಯಿಬಾಬ

(2) ರಾಮಾನುಜ

(3) ಮಧ್ವಾಚಾರ್ಯ

(4) ಶಂಕರ

(ಉತ್ತರ:-3)

61. ಮೈಸೂರು ಎಂಬ ಹೆಸರು ಮಹಿಷಾಸುರ ನಗರ ಎಂಬ ಮೂಲಶಬ್ಧದಿಂದ ಉತ್ಪನ್ನಗೊಂಡಿದೆ, ಈ ಮಹಿಷಾಸುರ ಎಂಬ ರಕ್ಕಸನನ್ನು ಧ್ವಂಸ ಮಾಡಿದ್ದು

(1) ಮಹಿಷಾಸುರ ಮರ್ದಿನಿ

(2) ದೇವಿ ಚಾಮುಂಡಿ

(3) ಕಾಳಿಕಾ ದೇವಿ

(4) ಪಾರ್ವತಿ ದೇವಿ

(ಉತ್ತರ:-2)

62. “ಐ ಜಸ್ಟ್ ಕಾಲ್ಡ್ ಟು ಸೇ ಐ ಲವ್ ಯು”ಗಾಗಿ ಅಕಾಡೆಮಿ ಪ್ರಶಸ್ತಿ ಗೆದ್ದಿರುವ ಸ್ಟೀವ್ ವಂಡರ್ ಯಾವ ಅಸಮರ್ಥತೆಯಿಂದ ಬಳಲುತ್ತಿದ್ದ

(1) ಕುರುಡುತನ

(2) ಛೇದಿಸಲ್ಪಟ್ಟ ಕಾಲು

(3) ಮಾತನಾಡುವ ಶಕ್ತಿ ಕಳೆದುಕೊಂಡಿದ್ದ

(4) ಶ್ರವಣ ಶಕ್ತಿ ಕಳೆದುಕೊಂಡಿದ್ದ

(ಉತ್ತರ:-1)

63. ಗಿರೀಶ್ ಕಾರ್ನಾಡ್ ರವರ ಚೊಚ್ಚಲ ಚಲನಚಿತ್ರ “ಸಂಸ್ಕಾರ” ಯಾರ ಕಾದಂಬರಿಯನ್ನು ಆಧರಿಸಿದ್ದು

(1) ಖಂಡೇಕರ್

(2) ಯು.ಆರ್.ಅನಂತಮೂರ್ತಿ

(3) ಅನೂಷ್ಕಾ ಶಂಕರ

(4) ವಿಕ್ರಂ ಸೇತ್

(ಉತ್ತರ:-2)

64. ಕುವೆಂಪು ವಿಶ್ವವಿದ್ಯಾನಿಲಯವಿರುವ ಸ್ಥಳ

(1) ಧಾರವಾಡ

(2) ಮಂಗಳೂರು

(3) ಶಿವಮೊಗ್ಗ

(4) ಗುಲ್ಬರ್ಗ

(ಉತ್ತರ:-3)

65. ಲೋಕಸಭೆ ರಚನೆಯಾದ ಐವತ್ತನೆಯ ವರ್ಷ ಎಂದು ಯಾವ ವರ್ಷವನ್ನು ಗುರುತಿಸಲಾಗಿದೆ

(1) 2001

(2) 2002

(3) 2003

(4) 2004

(ಉತ್ತರ:-1)

66. ಯಾವ ವರ್ಷದಲ್ಲಿ 42ನೇ ತಿದ್ದುಪಡಿ ಕಾಯ್ದೆಯು ಮೂಲಭೂತ ಕರ್ತವ್ಯಗಳಿಗೆ ಸಂಬಂಧಿಸಿದ ಹೊಸ ಅಧ್ಯಾಯವನ್ನು ಸಂವಿಧಾನದಲ್ಲಿ ಅಳವಡಿಸಿದೆ

(1) 1975

(2) 1976

(3) 1977

(4) 1984

(ಉತ್ತರ:-2)

67. ಉಪರಾಷ್ಟಪತಿಯವರು ಹೇಗೆ ಚುನಾಯಿಸಲ್ಪಡುತ್ತಾರೆ

(1) ಸಂಸತ್ತಿನ ಎರಡೂ ಸದನಗಳ ಸದಸ್ಯರಿಂದ ಕೂಡಿದ ನಿರ್ವಾಚಕ ಗಣದಿಂದ

(2) ಲೋಕಸಭೆಯ ಸದಸ್ಯರಿಂದ ಮಾತ್ರ

(3) ಸಂಸತ್ತಿನ ಎರಡೂ ಸದನದ ಸದಸ್ಯರು ಮತ್ತು ರಾಜ್ಯ ಶಾಸಕಾಂಗಗಳ ಸದಸ್ಯರಿಂದ

(4) ಲೋಕಸಭಾ ಸದಸ್ಯರು ಮತ್ತು ದೆಹಲಿ ರಾಜ್ಯ ಶಾಸಕಾಂಗದ ಸದಸ್ಯರಿಂದ

(ಉತ್ತರ:-1)

68. ಸಂಸತ್ತಿನಲ್ಲಿ ಕರ್ನಾಟಕಕ್ಕೆ ನಿಗದಿಯಾದ ಸದಸ್ಯರ ಸಂಖ್ಯೆಯನ್ನು ಸೂಚಿಸುವ ಕೆಳಗಿನ ಯಾವ ಹಂಚಿದೆ ಸರಿ

| | ರಾಜ್ಯಸಭೆ | ಲೋಕಸಭೆ |
|---|---|---|
| (1) | 13 | 29 |
| (2) | 12 | 28 |
| (3) | 12 | 30 |
| (4) | 11 | 28 |

(ಉತ್ತರ:-2)

69. ಭಾರತದಲ್ಲೀಗ ಇವರ ಜನ್ಮ ಶತಾಬ್ಧವನ್ನು ಆಚರಿಸಲಾಗುತ್ತಿದೆ (2008)

(1) ಪಿ.ಸಿ.ಮಹಾಲನೋಬಿಸ್

(2) ವಿ.ಕೆ.ಆರ್.ವಿ.ರಾವ್

(3) ಸಿ.ಎನ್.ವಕೀಲ್

(4) ಕೆ.ಎನ್.ರಾಜ್

(ಉತ್ತರ:-2)

70. ಭಾರತದಲ್ಲಿ ಈ ಕೆಳಕಂಡ ಯಾವ ರಾಜ್ಯ ಅತಿ ಉದ್ದದ ಸಮುದ್ರ ಕಿನಾರೆ ಹೊಂದಿದೆ

(1) ಕೇರಳ

(2) ಒರಿಸ್ಸ

(3) ಕರ್ನಾಟಕ

(4) ಆಂಧ್ರಪ್ರದೇಶ

(ಉತ್ತರ:-4)

71. ಕೆಳಗಿನ ಯಾವ ಕೃತಿಯನ್ನು ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾದ ನ್ಯಾಯಮೂರ್ತಿ ಕೆ.ಜಿ.ಬಾಲಕೃಷ್ಣನ್ ಬಿಡುಗಡೆಗೊಳಿಸಿದರು

(1) ಹ್ಯೂಮನ್ ರೈಟ್ಸ್, ಜಸ್ಟೀಸ್ ಎಂಡ್ ಕಾನ್ಸ್ಟಿಟ್ಯೂಶನಲ್ ಎಂಪವರ್ ಮೆಂಟ್

(2) ಮೈಕ್ರೊ ಇಕನಾಮಿಕ್ ರಿಫಾರ್ಮ್, ಗ್ರೋಥ್ ಎಂಡ್ ಸ್ಟೆಬಿಲಿಟಿ

(3) ಡೆಮಾಕ್ರಸಿ ಎಂಡ್ ಡೈವರ್ಸಿಟಿ

(4) ದ ಇಂಟರ್ ನ್ಯಾಶನಲ್ ಸ್ಟ್ರಗ್ಲ್ ಓವರ್ ಇರಾಖ್

(ಉತ್ತರ:-1)

72. “ರಾಷ್ಟ್ರೀಯ ಅರಿವು ಆಯೋಗ” (National Knowledge Commission) ಇದರ ಅಧ್ಯಕ್ಷರು

(1) ಸ್ಯಾಂ ಪಿಟ್ರೋಡ

(2) ಮನಮೋಹನ ಸಿಂಗ್

(3) ಡಾ.ಗಂಗೂಲಿ

(4) ಎಂ.ಎಸ್.ಸ್ವಾಮಿನಾಥನ್

(ಉತ್ತರ:-1)

73. "ಯುನಿವರ್ಸಲ್ ಕಾಪಿರೈಟ್ ಕನ್ವೆನ್ಷನ್" ಬಳಕೆಗೆ ಬಂದ ವರ್ಷ

(1) 1971

(2) 1972

(3) 1974

(4) 1975

(ಉತ್ತರ:-3)

74. ಇತ್ತೀಚೆಗೆ ಬಿಡುಗಡೆಗೊಂಡ "ದಿ ಟ್ರಯಲ್ ಆಫ್ ಬಹದ್ದೂರ್ ಶಾ ಜಫರ್" ಎಂಬ ಕೃತಿಯ ಲೇಖಕ

(1) ಎಂ.ಜೆ.ಅಕ್ಬರ್

(2) ಅಬ್ದುಲ್ ಕಲಾಂ ಆಜಾದ್

(3) ವಿಲಿಯಂ ದಲ್ ರಿಂಪ್ಲೇಸ್

(4) ಎಚ್.ಎಲ್.ಓ.ಗಾರ್ರೆಟ್

(ಉತ್ತರ:-4)

75. ಕೆಳಗೆ ಎರಡು ಹೇಳಿಕೆಗಳನ್ನು ಕೊಟ್ಟಿದೆ. A ಪ್ರತಿಪಾದನೆ, R ಸಮರ್ಥನೆ ಆಗಿವೆ.

ಕೊಟ್ಟಿರುವ ಸಂಕೇತಗಳಿಂದ ನಿಮ್ಮ ಉತ್ತರ ಆಯ್ಕೆಮಾಡಿ

ಪ್ರತಿಪಾದನೆ (A): ಓಝೋನ್ ಪದರವು ಅತಿಯಾದ ಸೌರವಿಕರಣದಿಂದ ಜೀವಿಗಳನ್ನು ರಕ್ಷಿಸುತ್ತದೆ

ಸಮರ್ಥನೆ (R) : ವಾತಾವರಣದಲ್ಲಿನ ಓಝೋನ್ ರಂಧ್ರ ಅಂಟಾರ್ಟಿಕದ ಮೇಲೆ ಇದೆ

ಸಂಕೇತ

(1) (A) ಮತ್ತು (R) ಎರಡೂ ಸರಿ ಆದರೆ (A) ಗೆ ಸರಿಯಾದ ವಿವರಣೆ (R) ಅಲ್ಲ

(2) (A) ಮತ್ತು (R) ಎರಡೂ ಸರಿ ಆದರೆ (A) ಗೆ ಸರಿಯಾದ ವಿವರಣೆ (R) ಆಗಿದೆ

(3) (A) ತಪ್ಪಾಗಿದೆ ಆದರೆ (R) ಸರಿಯಾಗಿದೆ

(4) (A) ಸರಿಯಾಗಿದೆ ಆದರೆ (R) ತಪ್ಪಾಗಿದೆ (ಉತ್ತರ:-1)

76. ಎಕ್ಸಫೋಲಿಯೇಷನ್ (Exfoliation) ಎಂಬುದು ಒಂದು

(1) ಜೈವಿಕ ಕಾರ್ಯವಿಧಾನ

(2) ರಾಸಾಯನಿಕ ಕಾರ್ಯವಿಧಾನ

(3) ಭೌತಿಕ ಕಾರ್ಯವಿಧಾನ

(4) ಪರಿಸರ ವಿಜ್ಞಾನದ ಕಾರ್ಯವಿಧಾನ (ಉತ್ತರ:-3)

77. ಕೆಳಗಿನ ಯಾವ ಸಾಗರವು ಭೂಕವಚದ ಪದರದ ಚಲನೆಯಿಂದ ವಿಸ್ತಾರವಾಗುತ್ತಿದೆ

(1) ಶಾಂತಸಾಗರ

(2) ಅಟ್ಲಾಂಟಿಕ್ ಸಾಗರ

(3) ಆರ್ಕಟಿಕ್ ಸಾಗರ

(4) ಹಿಂದೂ ಮಹಾ ಸಾಗರ

(ಉತ್ತರ:-2)

78. ಹಕ್ಕಿಕಾಲು ನದಿ ಮುಖಜ ಭೂಮಿಗೆ (bird-foot delta) ಕೆಳಗಿನ ಯಾವ ನದಿಯು ಉತ್ತಮ ಉದಾಹರಣೆ

(1) ಅಮೆಜಾನ್

(2) ನೈಲ್

(3) ಗಂಗಾ

(4) ಮಿಸಿಸಿಪಿ

(ಉತ್ತರ:-4)

79. ಅಯಾನೊಸ್ಫಿಯರ್ ಎಷ್ಟು ಎತ್ತರದಲ್ಲಿದೆ

(1) 40 ರಿಂದ 200 ಕಿ.ಮೀ. ಎತ್ತರದವರೆಗೆ

(2) 60 ರಿಂದ 300 ಕಿ.ಮೀ. ಎತ್ತರದವರೆಗೆ

(3) 80 ರಿಂದ 400 ಕಿ.ಮೀ. ಎತ್ತರದವರೆಗೆ

(4) 100 ರಿಂದ 500 ಕಿ.ಮೀ. ಎತ್ತರದವರೆಗೆ

(ಉತ್ತರ:-3)

80. ವಾತಾವರಣವು ಬಿಸಿಯಾಗುವುದು

(1) ಸೂರ್ಯನ ನೇರ ಕಿರಣಗಳಿಂದ

(2) ಜ್ವಾಲಾಮುಖಿಯ ಹೊರಸೂಸುವಿಕೆಯಿಂದ

(3) ಭೂಮಿಯಿಂದ ಹೊರಡುವ ವಿಕಿರಣದಿಂದ

(4) ಸಾಗರದಲ್ಲಿನ ಸೆಳೆತ ಮತ್ತು ಪ್ರವಾಹದಿಂದ

(ಉತ್ತರ:-3)

81. ಕನ್ಹಾ ರಾಷ್ಟ್ರೀಯ ಉದ್ಯಾನವನ ಇರುವುದು

(1) ರಾಜಸ್ಥಾನದಲ್ಲಿ

(2) ಮಧ್ಯಪ್ರದೇಶದಲ್ಲಿ

(3) ಉತ್ತರಪ್ರದೇಶದಲ್ಲಿ

(4) ಅಸ್ಸಾಂನಲ್ಲಿ

(ಉತ್ತರ:-2)

82. ವಿಶ್ವದಲ್ಲಿ ಎರಡನೇ ಅತ್ಯಂತ ಹೆಚ್ಚು ಜನಸಂಖ್ಯೆ ಇರುವ ಭೂಖಂಡವು

(1) ದಕ್ಷಿಣ ಅಮೆರಿಕ

(2) ಯುರೋಪ್

(3) ಉತ್ತರ ಅಮೆರಿಕ

(4) ಆಫ್ರಿಕಾ

(ಉತ್ತರ:-4)

83. ಕೆಳಗಿನವುಗಳಲ್ಲಿ ಯಾ ಕ್ರಿಯಾ ಚಟುವಟಿಕೆಯು ದ್ವಿತೀಯ ರಂಗದ ಅಡಿಯಲ್ಲಿ ಬರುತ್ತದೆ

(1) ತಯಾರಿಕಾ/ಕೈಗಾರಿಕೆ

(2) ಪಶುಸಂಗೋಪನದ

(3) ಸರಕಾರಿ ಸೇವೆಗಳು

(4) ಸಾಗಾಟ ಮತ್ತು ವ್ಯಾಪಾರ

(ಉತ್ತರ:-1)

84. ದಂಡಕಾರಣ್ಯವು ಎಲ್ಲಿದೆ

(1) ರಾಜ್ ಪುರ್ ಜಿಲ್ಲೆ

(2) ಬಸ್ತಾರ್ ಜಿಲ್ಲೆ

(3) ಚಿದ್ವಾರಾ ಜಿಲ್ಲೆ

(4) ಕಮ್ಮಮ್ ಜಿಲ್ಲೆ

(ಉತ್ತರ:-2)

85. ರಿಹಾಂಡ್ ಕಣಿವೆ ಪರಿಯೋಜನೆ ಇಲ್ಲಿದೆ

(1) ಒರಿಸ್ಸಾ

(2) ಗುಜರಾತ್

(3) ಬಿಹಾರ್

(4) ಉತ್ತರ ಪ್ರದೇಶ

(ಉತ್ತರ:-4)

86. ಲಿಮೊನೈಟ್ ಎಂಬುದು ಇದರ ಒಂದು ವಿಧ ಅಥವಾ ಮಾದರಿಯಾಗಿದೆ

(1) ತಾಮ್ರದ ಅದಿರು

(2) ಕಲ್ಲಿದ್ದಲು

(3) ಬಾಕ್ಸೈಟ್

(4) ಕಬ್ಬಿಣದ ಅದಿರು

(ಉತ್ತರ:-4)

87. ಸುರ್ಮಾ ಕಣಿವೆ ಇಲ್ಲಿದೆ

(1) ಅಸ್ಸಾಂ

(2) ಒರಿಸ್ಸಾ

(3) ಪಶ್ಚಿಮ ಬಂಗಾಳ

(4) ಬಿಹಾರ್

(ಉತ್ತರ:-1)

88. ಪ್ಲಾನಿ ಮೀಟರ್ (Planimeter) ನ್ನು ಇದನ್ನು ಅಳೆಯಲು ಉಪಯೋಗಿಸುತ್ತಾರೆ

(1) ನಕಾಶೆಯಲ್ಲಿನ ವಿಸ್ತೀರ್ಣ

(2) ನಕಾಶೆಯಲ್ಲಿನ ದೂರ ಅಥವಾ ಅಂತರ

(3) ನಕಾಶೆಯಲ್ಲಿನ ದಿಕ್ಕು

(4) ನಕ್ಷೆಯಲ್ಲಿನ ಅಕ್ಷಾಂಶ, ರೇಕಾಂಶ ಸೂಚಿಸುವ ಗೆರೆಗಳನ್ನು

(ಉತ್ತರ:-1)

89. ಕೀಲ್ ಕಾಲುವೆ (Kiel Canal) ಇವುಗಳನ್ನು ಜೋಡಿಸುತ್ತದೆ

(1) ಬಾಲ್ಟಿಕ್ ಸಮುದ್ರ ಮತ್ತು ಉತ್ತರ ಸಮುದ್ರ

(2) ಕೆಂಪು ಸಮುದ್ರ ಮತ್ತು ಮೆಡಿಟರೇನಿಯನ್ ಸಮುದ್ರ

(3) ಕ್ಯಾರಿಬಿಯನ್ ಸಮುದ್ರ ಮತ್ತು ಶಾಂತ ಸಾಗರ

(4) ಅಟ್ಲಾಂಟಿಕ್ ಸಾಗರ ಮತ್ತು ಶಾಂತ ಸಾಗರ

(ಉತ್ತರ:-4)

೯೦. ಕೆಳಗಿನ ಯಾವ ರಾಜ್ಯವು ಅತ್ಯಂತ ಹೆಚ್ಚು ವಿಸ್ತಾರದ ಕಾಡನ್ನು ಹೊಂದಿದೆ

(1) ಮಿಜೋರಂ

(2) ಅರುಣಾಚಲ ಪ್ರದೇಶ

(3) ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು

(4) ಜಮ್ಮು ಮತ್ತು ಕಾಶ್ಮೀರ

(ಉತ್ತರ:-2)

೯1. ನತುಲಾ ಕಣಿವೆ ಮಾರ್ಗವಿರುವುದು

(1) ಭಾರತ-ಭೂತಾನ್ ವ್ಯಾಪಾರಿ ಮಾರ್ಗದಲ್ಲಿ

(2) ಭಾರತ-ಟಿಬೆಟ್ ವ್ಯಾಪಾರಿ ಮಾರ್ಗದಲ್ಲಿ

(3) ಭಾರತ-ಮ್ಯಾನ್ಮರ್ ವ್ಯಾಪಾರಿ ಮಾರ್ಗದಲ್ಲಿ

(4) ಭಾರತ-ನೇಪಾಳ ವ್ಯಾಪಾರಿ ಮಾರ್ಗದಲ್ಲಿ

(ಉತ್ತರ:-2)

೯2. ಹಾರ್ನ್ (Horn) ಎಂಬದು ಇದರ ಭೂ ದೃಶ್ಯ ಚಿತ್ರಣವಾಗಿದೆ

(1) ಭೂಜಲ

(2) ನದಿ

(3) ಬೀಸುಗಾಳಿ

(4) ಹಿಮರಾಶಿ ಜಾರಿ ಹರಿಯುವ ನೀರ್ಗಲ್ಲ ನದಿ

(ಉತ್ತರ:-4)

93. ಗೋವಿಂದ್ ವಲ್ಲಭ್ ಪಂತ್ ಜಲಾಶಯ ಇಲ್ಲಿದೆ

(1) ಮಧ್ಯಪ್ರದೇಶ

(2) ಉತ್ತರಾಂಚಲ

(3) ಛತ್ತೀಸ್ ಘರ್

(4) ಮೇಲಿನ ಯಾವುದು ಅಲ್ಲ

(ಉತ್ತರ:-4)

94. ಭಾರತದ ಭೌಗೋಳಿಕ ವಿಸ್ತೀರ್ಣವು

(1) 30.23 ಲಕ್ಷ ಚ.ಕಿ.ಮೀ

(2) 31.84 ಲಕ್ಷ ಚ.ಕಿ.ಮೀ.

(3) 32.87 ಲಕ್ಷ ಚ.ಕಿ.ಮೀ

(4) 34.13 ಲಕ್ಷ ಚ.ಕಿ.ಮೀ

(ಉತ್ತರ:-3)

95. ನಮ್ಮ ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರಾಗಿದ್ದವರು ಯಾರು

(1) ಜೆ.ಬಿ.ಕೃಪಲಾನಿ

(2) ರಾಜೇಂದ್ರ ಪ್ರಸಾದ್

(3) ಜೆ.ಎಲ್.ನೆಹರು

(4) ಬಿ.ಆರ್.ಅಂಬೇಡ್ಕರ್

(ಉತ್ತರ:-4)

96. ಶ್ರೀಮತಿ ಬೆನಜೀರ್ ಭುಟ್ಟೋರವರನ್ನು ಎಲ್ಲಿ ಹತ್ಯೆ ಮಾಡಲಾಯಿತು

(1) ಕರಾಚಿ

(2) ಲರ್ಖಾನ

(3) ಇಸ್ಲಾಮಾಬಾದ್

(4) ರಾವಲ್ಪಿಂಡಿ

(ಉತ್ತರ:-4)

97. ಪ್ರಖ್ಯಾತ ಕೋಪಕಬಾನ ಬೀಚ್ (Copacabana Beach) ಎಲ್ಲಿದೆ

(1) ಹವಾಯಿ ದ್ವೀಪಗಳು

(2) ಬ್ಯೂನಸ್ ಐರಿಸ್

(3) ವಾಲೆಟ್ಟ

(4) ರಿಯೋ ಡಿ ಜನೈರೊ

(ಉತ್ತರ:-4)

98. 9ನೇ ವಿಶ್ವಕಪ್ ಕ್ರಿಕೆಟ್ ಪಂದ್ಯಾಟಗಳಲ್ಲಿ ಹ್ಯಾಟ್ರಿಕ್ ಗಳಿಸಿದವರು ಯಾರು

(1) ಆಸ್ಟ್ರೇಲಿಯಾದ ಬ್ರೆಟ್ ಲೀ

(2) ಶ್ರೀಲಂಕಾದ ಲಸಿತ್ ಮಾಲಿಂಗ

(3) ಬಾಂಗ್ಲಾದೇಶದ ಮೋರ್ತೋಜ

(4) ನ್ಯೂಜಿಲ್ಯಾಂಡಿನ ಶೇನ್ ಬಾಂಡ್

(ಉತ್ತರ:-2)

99. ಭಾರತದ ಪ್ರಪ್ರಥಮ ವಿದ್ಯುತ್ ಬ್ಯಾಟರಿ ಚಾಲಿನ ಕಾರು ಯಾವುದು

(1) ಮಾರುತಿ 800

(2) ಇಂಡಿಕಾ

(3) ರೇವಾ

(4) ಫಿಯಟ್ ಯುನೋ

(ಉತ್ತರ:-3)

100. ಆಕಾಶದ ನೀಲ ಬಣ್ಣವು ಇದರಿಂದಾಗುವ ಒಂದು

(1) ಬೆಳಕಿನ ಚದುರುವಿಕೆ

(2) ಬೆಳಕಿನ ಹೀರುವಿಕೆ

(3) ಬೆಳಕಿನ ಪ್ರಸರಣ

(4) ಬೆಳಕಿನ ಪ್ರತಿಫಲನ

(ಉತ್ತರ:-1)